**ಅ.ದಾ. ಸಂ. 250/2015 DW-1**

**<u>ದಿನಾಂಕಃ 30.10.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.</u>**

<u>ಪಾಟೀ ಸವಾಲು ವಾದಿ ಪರ ಶ್ರೀ. ಹೆಚ್.ಎಸ್. ಹೆಚ್. ವಕೀಲರಿಂದಃ-</u>

1) ವಾದಿ ಯಾವ ಪರಿಹಾರ ಕೋರಿ ದಾವೆ ಸಲ್ಲಿಸಿದ್ದಾರೆ ಎಂದು ತಿಳಿದುಕೊಂಡಿದ್ದೇನೆ. ನಾನು ಸಲ್ಲಿಸಿರುವ ತಕರಾರಿನಲ್ಲಿರುವ ಅಂಶಗಳನ್ನು ತಿಳಿದುಕೊಂಡಿದ್ದೇನೆ. ನನಗೆ ಓದಲು ಬರೆಯಲು ಬರುವುದಿಲ್ಲ ಆದರೆ ಸಹಿ ಮಾಡುತ್ತೇನೆ. ನನಗೆ ಸುಮಾರು 14-15 ವರ್ಷ ವಯಸ್ಸು ಇರುವಾಗ ನನ್ನ ತಂದೆ ಮೃತಪಟ್ಟಿರುತ್ತಾರೆ. ನನ್ನ ತಾಯಿ ಮೃತ ಪಟ್ಟು ಸುಮಾರು 22-23 ವರ್ಷಗಳಾಗಿರಬಹುದು. ನನ್ನ ಮದುವೆ ಕಾಲಕ್ಕೆ ನಮ್ಮ ತಂದೆ ಅದಾಗಲೇ ಮೃತ ಪಟ್ಟಿದ್ದರು. ನನ್ನ ತಂದೆ-ತಾಯಿ ಅವರ ಜೀವಿತಾವಧಿಯಲ್ಲಿ ಯಾವುದೇ ಆಸ್ತಿ ಖರೀದಿಸಿಲ್ಲ. ನಾನು ಯಾವುದೇ ಆಸ್ತಿಯನ್ನು ಖರೀದಿಸಿಲ್ಲ. ದಾವಾ ಷೆಡ್ಯೂಲ್ ಸ್ವತ್ತುಗಳು ನಮ್ಮ ತಾತನ ಸ್ವತ್ತುಗಳು ಎಂದರೆ ಸರಿ. ದಾವಾ ಷೆಡ್ಯೂಲ್ ಸ್ವತ್ತುಗಳು ನಮ್ಮ ತಾತನ ಸ್ವತ್ತುಗಳಾಗಿರುವ ಕಾರಣ ನಮ್ಮ ತಂದೆಯಾಗಲೀ ಅಥವಾ ನಾನಾಗಲೀ ದಾನ ಧರ್ಮ ಮಾಡಲು ಹಕ್ಕು ವಗೈರೆ ಹೊಂದಿಲ್ಲ ಎಂದರೆ ಗೊತ್ತಿಲ್ಲ.

2) ನನ್ನ ತಂದೆ ತಾಯಿ ಜೀವಿತಾವಧಿಯಲ್ಲಿಯೇ ಹೆಣ್ಣುಮಕ್ಕಳ ಮದುವೆ ಮಾಡಲಾಗಿತ್ತು ಎಂದರೆ ಸರಿ. ಮದುವೆ ಕಾಲಕ್ಕೆ ಹೆಣ್ಣು ಮಕ್ಕಳಿಗೆ ಸೇರಬೇಕಾದ ಭಾಗವನ್ನು ನಗ, ನಾಣ್ಯ ರೂಪದಲ್ಲಿ ನೀಡಿದ್ದರು ಎಂದರೆ ಸರಿ. ನನ್ನ ಸಹೋದರಿಯರನ್ನು ಈ ದಾವೆಯ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದು ನಾನು ತಕರಾರು ಸಲ್ಲಿಸಿದ ನಂತರ ಸದರಿಯವರನ್ನು ಪಕ್ಷಗಾರರನ್ನಾಗಿ ಮಾಡಲು ಪ್ರತ್ಯೇಕ ಅರ್ಜಿ ಸಲ್ಲಿಸಿದ್ದೇನೆ. 2 ನೇ ಪ್ರತಿವಾದಿಯಿಂದ ನಾನು ಯಾವುದೇ ವಿಚ್ಛೇದನ ಪಡೆದುಕೊಂಡಿಲ್ಲ. 2 ನೇ ಪ್ರತಿವಾದಿ ಈಗಲೂ ಸಹ ಜೀವಂತವಾಗಿದ್ದಾರೆ ಎಂದರೆ ಸರಿ. ಮೊದಲನೇ ಹೆಂಡತಿ ಬದುಕಿದ್ದಾಗಲೇ 2 ನೇ ಮದುವೆಯಾಗುವುದು ಕಾನೂನು ಬಾಹಿರ ಎಂದು ನಿಮಗೆ ಗೊತ್ತಿದೆಯೇ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ನಮ್ಮ ಊರಿನ ಗ್ರಾಮಸ್ಥರು ಮತ್ತು ಹಿರಿಯರು ಹೇಳಿದ ಮೇರೆಗೆ ನಾನು 2 ನೇ ಮದುವೆ ಮಾಡಿಕೊಂಡಿದ್ದೇನೆ ಎಂದು

ನುಡಿಯುತ್ತಾರೆ. ಮೊದಲನೇ ಹೆಂಡತಿ ಹಾಗೂ ವಾದಿಗೆ ನೀವೇನಾದರೂ ಜೀವನಾಂಶ ನೀಡಿದ್ದೀರಾ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಅದು ನಮ್ಮ ತಾಯಿಗೆ ಸೇರಿದ್ದು ಎಂದು ನುಡಿಯುತ್ತಾರೆ.

3) ನಿಡಿ.6 ದಾನ ಪತ್ರದ ಆಧಾರದ ಮೇಲೆ ಯಾವುದೇ ಖಾತೆ ಆಗಿಲ್ಲ. ನೀವು ಹೇಳುವ ಪ್ರಕಾರ ದಾನ ಪತ್ರವನ್ನುನಿಮ್ಮ ತಾಯಿನಿಮ್ಮ ಅಕ್ಕನಿಗೆ ಬರೆದುಕೊಟ್ಟಿದ್ದು ಸದರಿ ಅಸಲು ದಾನಪತ್ರ ನಿಮ್ಮ ಬಳಿ ಹೇಗೆಬಂತು ಎಂದರೆ ಸಾಕ್ಷಿ ನಮ್ಮ ಅಕ್ಕನ ಗಂಡ ನೀಡಿದರು ಎಂದು ನುಡಿಯುತ್ತಾರೆ. ನಮ್ಮ ಅಕ್ಕನ ಗಂಡ ಈಗ ಒಂದು ವಾರದ ಹಿಂದೆ ಮೃತಪಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ